**2010 (2198) ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) :–** ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2006–07ನೇ ಸಾಲಿನಲ್ಲಿ ಬಡ ಗ್ರಾಮೀಣ ವಿದ್ಯಾರ್ಥಿನಿಯರಿಗೆ ನೀಡಲಾದ ಸೈಕಲ್‌ಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು);

ಆ) ಇದಕ್ಕೆ ತಗಲುವ ವೆಚ್ಚ ಎಷ್ಟು;

ಇ) ಇನ್ನು ಎಷ್ಟು ಮಂದಿ ಹೆಣ್ಣು ಮಕ್ಕಳಿಗೆ ಸೈಕಲ್ ವಿತರಿಸಬೇಕಾಗಿದೆ (ಜಿಲ್ಲಾವಾರು ಮಾಹಿತಿ ನೀಡುವುದು);

ಈ) ಈ ಯೋಜನೆಯ ಲಾಭವನ್ನು ನಗರ ಪಟ್ಟಣ ಪ್ರದೇಶದ ಬಡ ಹೆಣ್ಣುಮಕ್ಕಳಿಗೂ ವಿಸ್ತರಿಸುವ ಯೋಜನೆ ಏನಾದರೂ ಇದೆಯೇ;

ಉ) ಇದ್ದಲ್ಲಿ, ಯಾವಾಗ ಜಾರಿಗೆ ತರಲಾಗುವುದು?

**ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :**

ಅ) 2006–07ನೇ ಸಾಲಿನಲ್ಲಿ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಕ್ಕೆ ಸೇರಿದ ಒಟ್ಟು 1,75,023 ಹೆಣ್ಣು ಮಕ್ಕಳಿಗೆ ಉಚಿತ ಬೈಸಿಕಲ್‌ಗಳನ್ನು ವಿತರಿಸಲಾಗಿದೆ. ಜಿಲ್ಲಾವಾರು ವಿವರ ಇಂತಿದೆ:–

| ಜಿಲ್ಲೆಯ ಹೆಸರು | ಬೈಸಿಕಲ್‌ಗಳ ಸಂಖ್ಯೆ |
|---|---|
| ಬೆಂಗಳೂರು ಉತ್ತರ | 2806 |
| ಬೆಂಗಳೂರು ದಕ್ಷಿಣ | 5421 |
| ಬೆಂಗಳೂರು ಗ್ರಾಮಾಂತರ | 7135 |
| ಚಿಕ್ಕಬಳ್ಳಾಪುರ | 5653 |
| ಕೋಲಾರ | 5985 |
| ಮಧುಗಿರಿ | 5638 |
| ತುಮಕೂರು | 6853 |
| ಚಾಮರಾಜನಗರ | 3498 |
| ಮೈಸೂರು | 12207 |

| ಜಿಲ್ಲೆಯ ಹೆಸರು | ಬೈಸಿಕಲ್‌ಗಳ ಸಂಖ್ಯೆ |
|---|---|
| ಮಂಡ್ಯ | 7566 |
| ಉಡುಪಿ | 3913 |
| ದಕ್ಷಿಣ ಕನ್ನಡ | 5653 |
| ಕೊಡಗು | 1567 |
| ದಾವಣಗೆರೆ | 7924 |
| ಚಿತ್ರದುರ್ಗ | 7717 |
| ಚಿಕ್ಕಮಗಳೂರು | 4187 |
| ಶಿವಮೊಗ್ಗ | 7334 |
| ಹಾಸನ | 7993 |
| ಹಾವೇರಿ | 6987 |
| ಗದಗ | 2277 |
| ಧಾರವಾಡ | 3337 |
| ಚಿಕ್ಕೋಡಿ | 5886 |
| ಬೆಳಗಾಂ | 4620 |
| ಬಾಗಲಕೋಟೆ | 4452 |
| ಬಿಜಾಪುರ | 6182 |
| ಉತ್ತರ ಕನ್ನಡ | 5457 |
| ಯಾದಗಿರಿ | 3093 |
| ಗುಲ್ಬರ್ಗಾ | 4027 |
| ಕೊಪ್ಪಳ | 3838 |
| ರಾಯಚೂರು | 3684 |
| ಬೀದರ್ | 7305 |
| ಬಳ್ಳಾರಿ | 4828 |

ಆ) ಬೈಸಿಕಲ್‌ಗಳ ಖರೀದಿ ಮತ್ತು ಇತರೆ ವೆಚ್ಚಗಳು ಸೇರಿ ಒಟ್ಟು ರೂ.35.73 ಕೋಟಿ ಖರ್ಚಾಗಿರುತ್ತದೆ.

ಇ) ಬೆಂಗಳೂರು ಗ್ರಾಮಾಂತರ ಜಿಲ್ಲೆ – 1131, ಚಿಕ್ಕಬಳ್ಳಾಪುರ – 504, ದಾವಣಗೆರೆ – 1639, ತುಮಕೂರು – 1149, ಚಿಕ್ಕಮಗಳೂರು – 282, ಮೈಸೂರು – 382, ಉಡುಪಿ – 299, ಬಾಗಲಕೋಟೆ – 601, ಚಿಕ್ಕೋಡಿ – 2032, ಧಾರವಾಡ – 767, ಬಳ್ಳಾರಿ – 1215 ಮತ್ತು ಬೀದರ್ – 530 ಜಿಲ್ಲೆಗಳಿಗೆ ಒಟ್ಟು 10,531 ಬೈಸಿಕಲ್‌ಗಳು ವಿತರಿಸಬೇಕಾಗಿರುತ್ತದೆ.

ಈ) 2006–07ನೇ ಸಾಲಿನಲ್ಲಿ ಈ ಯೋಜನೆಯನ್ನು ರಾಜ್ಯದ ಎಲ್ಲಾ ನಗರ/ಪಟ್ಟಣ ಪ್ರದೇಶಗಳನ್ನು ಒಳಗೊಂಡಂತೆ ಬಿ.ಪಿ.ಎಲ್. ಕುಟುಂಬಕ್ಕೆ ಸೇರಿದ ಹೆಣ್ಣು ಮಕ್ಕಳಿಗೆ ವಿಸ್ತರಿಸಲಾಗಿದೆ.

ಉ) – ಉದ್ಭವಿಸುವುದಿಲ್ಲ –

**2011(2393) ಶ್ರೀ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ):–** ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಹಾಗೂ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು);

ಆ) ಮುದ್ದೇಬಿಹಾಳ್ ತಾಲ್ಲೂಕಿನಲ್ಲಿ ಸರ್ಕಾರಿ ಅಥವಾ ಖಾಸಗಿ ಇಂಜಿನಿಯರಿಂಗ್ ಕಾಲೇಜು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಮುದ್ದೇಬಿಹಾಳ್ ತಾಲ್ಲೂಕಿನಲ್ಲಿ 2007–08ರಲ್ಲಿ ಖಾಸಗಿ ಇಂಜಿನಿಯರಿಂಗ್ ಕಾಲೇಜು ಪ್ರಾರಂಭಿಸಲು ಸರ್ಕಾರದ ಅನುಮತಿ ನೀಡುತ್ತದೆಯೇ?

**ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) :**

ಅ) ರಾಜ್ಯದಲ್ಲಿ 5 ಸರ್ಕಾರಿ ವಿಶ್ವವಿದ್ಯಾಲಯ ಇಂಜಿನಿಯರಿಂಗ್ ಕಾಲೇಜುಗಳು, 11 ಖಾಸಗಿ ಅನುದಾನಿತ ಹಾಗೂ 107 ಖಾಸಗಿ ಅನುದಾನರಹಿತ ಇಂಜಿನಿಯರಿಂಗ್ ಕಾಲೇಜುಗಳು ಇವೆ.

ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಹೌದು.

ಇ) 2007–08ನೇ ಸಾಲಿಗೆ ಖಾಸಗಿ ವಿದ್ಯಾಸಂಸ್ಥೆಗಳಿಂದ ಇಂಜಿನಿಯರಿಂಗ್ ಕಾಲೇಜು ಪ್ರಾರಂಭಿಸಲು ಪ್ರಸ್ತಾವನೆ ಬಂದಲ್ಲಿ ಎ.ಐ.ಸಿ.ಟಿ.ಇ ನವದೆಹಲಿ, ಇವರ ನಿಯಮಾವಳಿ ಅನುಸಾರ ಪರಿಶೀಲಿಸಲಾಗುವುದು.